**ಕರ್ನಾಟಕ ಸರ್ಕಾರ**

ಸಂಖ್ಯೆ: ಪಪೂಶಿಇ/ಆವಿಎ/ವಿನಿ-3/ಪ್ರಾ.ವರ್ಗ/3/2020-21

ನಿರ್ದೇಶಕರ ಕಚೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560012.
ದಿನಾಂಕ: 11/11/2020.

# ಪ್ರಕಟಣೆ

2019-20ನೇ ಸಾಲಿನ ಪದವಿ ಪೂರ್ವ ಶಿಕ್ಷಣ ಇಲಾಖೆಯ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ದಿನಾಂಕ: 12/11/2020 ರ ಮಧ್ಯಾಹ್ನ 1.00 ರಿಂದ 3.00 ರವರೆಗೆ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳ ಕಚೇರಿಯ ಕೆ-ಸ್ವಾನ್ ಕೊಠಡಿಯಲ್ಲಿ ಸ್ಥಳನಿಯುಕ್ತಿ ಕೌನ್ಸೆಲಿಂಗ್ ನಡೆಸಲಾಗುವುದು. ಪ್ರಾಚಾರ್ಯರ ವರ್ಗಾವಣೆಯ ಅಂತಿಮ ಆದ್ಯತಾ ಪಟ್ಟಿ ಹಾಗು ಖಾಲಿ ಹುದ್ದೆಗಳ ಮಾಹಿತಿಯನ್ನು ಇಲಾಖಾ ವೆಬ್‌ಸೈಟ್ www.pue.kar.nic.in ನ ಈ ಲಿಂಕ್‌ನಲ್ಲಿ ದಿನಾಂಕ: 11/11/2020 ರಂದು ಪ್ರಕಟಿಸಲಾಗಿದೆ. ಪ್ರಾಚಾರ್ಯರು ವರ್ಗಾವಣಾ ಕೌನ್ಸೆಲಿಂಗ್ ಸಮಯದಲ್ಲಿ ಈ ಕೆಳಕಂಡ ಸೂಚನೆ ಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಲಾಗಿದೆ:

1. ಪ್ರಾಚಾರ್ಯರು ವೇಳಾಪಟ್ಟಿ ಅನುಸಾರ ನಿಗದಿಪಡಿಸಿದ ಸಮಯ ಹಾಗೂ ಸ್ಥಳದಲ್ಲಿ ಒಂದು ಗಂಟೆ ಮುಂಚಿತವಾಗಿ ಹಾಜರಾಗಿ ಜಿಲ್ಲಾ ಉಪನಿರ್ದೇಶಕರಿಗೆ ವರದಿ ಮಾಡಿಕೊಳ್ಳುವುದು.
2. ದಿನಾಂಕ: 04/11/2020ರ ಜ್ಞಾಪನದಲ್ಲಿ (ವರ್ಗಾವಣಾ ಮಾರ್ಗಸೂಚಿ) ತಿಳಿಸಿರುವಂತೆ, ಆದ್ಯತಾ ಕೋರಿ ಅರ್ಜಿ ಸಲ್ಲಿಸಿರುವ ದಾಖಲೆಗಳನ್ನು (ವೈದ್ಯಕೀಯ, ಸೇವಾ ದೃಢೀಕರಣ ಪತ್ರ, ಇತರೆ ನಿಗಧಿತ ಪ್ರಮಾಣ ಪತ್ರಗಳನ್ನು) ಕೌನ್ಸೆಲಿಂಗ್‌ಗೆ ಹಾಜರಾಗುವಾಗ ಜಿಲ್ಲಾ ಉಪ ನಿರ್ದೇಶಕರಿಗೆ ಪ್ರಸ್ತುತ ಪಡಿಸಲು ಸೂಚಿಸಿದೆ.
3. ರಾಜ್ಯವ್ಯಾಪಿ ಸ್ಥಳೀಯ ವೃಂದದ (ಕಲ್ಯಾಣ-ಕರ್ನಾಟಕ ಪ್ರದೇಶದ) ಆದ್ಯತೆ ಪಡೆದ ಪ್ರಾಚಾರ್ಯರು ಆಯಾ ಪ್ರಾಂತ್ಯದ ಸ್ಥಳವನ್ನೇ ಆಯ್ಕೆ ಮಾಡಿಕೊಳ್ಳಲು ಅವಕಾಶವಿರುತ್ತದೆ.
4. ಪ್ರಾಚಾರ್ಯರು ರಾಜ್ಯದ ಯಾವುದೇ ಜಿಲ್ಲೆಯ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕೌನ್ಸೆಲಿಂಗ್ ಪ್ರಕ್ರಿಯೆಗೆ ಹಾಜರಾಗಬಹುದು. **ಆದರೆ, ಯಾವುದೇ ಕಾರಣಕ್ಕೂ ವರ್ಗಾವಣಾ ಸ್ಥಳನಿಯುಕ್ತಿ ಕೌನ್ಸೆಲಿಂಗ್ ಪ್ರಕ್ರಿಯೆಗೆ ಕೇಂದ್ರ ಕಚೇರಿಯಲ್ಲಿ ಹಾಜರಾಗತಕ್ಕದ್ದಲ್ಲ.**
5. ಪ್ರಾಚಾರ್ಯರು ಕೌನ್ಸೆಲಿಂಗ್‌ಗೆ ಹಾಜರಾಗುವ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯ ಕೌನ್ಸೆಲಿಂಗ್ ಕೊಠಡಿ ಹಾಗೂ ಪ್ರಾಂಗಣದಲ್ಲಿ, ಪೋಷಕರನ್ನಾಗಲೀ ಅಥವಾ ಇತರರನ್ನಾಗಲೀ ಕರೆತರತಕ್ಕದ್ದಲ್ಲ.
6. ಪ್ರಾಚಾರ್ಯರು ವರ್ಗಾವಣಾ ಸ್ಥಳನಿಯುಕ್ತಿ ಕೌನ್ಸೆಲಿಂಗ್ ಪ್ರಕ್ರಿಯೆಗೆ ತಮ್ಮ ಪರವಾಗಿ ಯಾವುದೇ ಕಾರಣಕ್ಕೂ ಬೇರೊಬ್ಬ ವ್ಯಕ್ತಿಗೆ ಹಾಜರಾಗಲು ಅವಕಾಶವಿರುವುದಿಲ್ಲ.
7. ಸ್ಥಳನಿಯುಕ್ತಿ ಕೌನ್ಸೆಲಿಂಗ್ ಸಂದರ್ಭದಲ್ಲಿ ಇಲಾಖಾ ವತಿಯಿಂದ ನೀಡಲಾಗುವ ಒಪ್ಪಿಗೆ ಪತ್ರವನ್ನು ದ್ವಿಪ್ರತಿಯಲ್ಲಿ ಪಡೆದು, ಆಯ್ಕೆಮಾಡಿಕೊಳ್ಳುವ ಸ್ಥಳವನ್ನು ಭರ್ತಿ ಮಾಡಿ ಜಿಲ್ಲಾ ಉಪನಿರ್ದೇಶಕರಿಂದ ಸಹಿ ಪಡೆದು, ಒಂದು ಸ್ವೀಕೃತಿ ಪ್ರತಿಯನ್ನು ಪಡೆಯತಕ್ಕದ್ದು.
8. ವರ್ಗಾವಣಾ ಕೌನ್ಸೆಲಿಂಗ್ ಸಂದರ್ಭದಲ್ಲಿ ಒಮ್ಮೆ ಆಯ್ಕೆಮಾಡಿಕೊಂಡ ಸ್ಥಳವನ್ನು ಯಾವುದೇ ಕಾರಣಕ್ಕೂ ಬದಲಾಯಿಸಲು ಅವಕಾಶವಿರುವುದಿಲ್ಲ.

9. ಶೂನ್ಯ ದಾಖಲಾತಿಯನ್ನು ಹೊಂದಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಖಾಲಿ ಹುದ್ದೆಗಳನ್ನು ವರ್ಗಾವಣಾ ಕೌನ್ಸೆಲಿಂಗ್‌ನಲ್ಲಿ ಸ್ಥಳ ಆಯ್ಕೆಗೆ ಅವಕಾಶವಿರುವುದಿಲ್ಲ.
10. ಕೋವಿಡ್-19 ಸಾಂಕ್ರಮಿಕ ರೋಗ ನಿಯಂತ್ರಣಕ್ಕಾಗಿ ಸರ್ಕಾರ ಹೊರಡಿಸಿರುವ ಪ್ರಮಾಣಿತ ಕಾರ್ಯಾಚರಣೆ ವಿಧಾನದನ್ವಯ (ಮಾಸ್ಕ್, ಸ್ಯಾನಿಟೈಸರ್, ಸಾಮಾಜಿಕ ಅಂತರ ಕಾಯ್ದುಕೊಳ್ಳುವಿಕೆ ಹಾಗೂ ಇತರೆ) ಕೌನ್ಸೆಲಿಂಗ್ ಪ್ರಕ್ರಿಯೆಗೆ ಹಾಜರಾಗತಕ್ಕದ್ದು.
11. ಇಲಾಖೆಯು ನಿಗದಿಪಡಿಸಿದ ಮಾನದಂಡಗಳನ್ವಯ ಕೌನ್ಸೆಲಿಂಗ್ ಪ್ರಕ್ರಿಯೆಯಲ್ಲಿ ಸ್ಥಳ ಆಯ್ಕೆ ಮಾಡಿಕೊಳ್ಳುವುದು. ಯಾವುದೇ ಕಾರಣಕ್ಕೂ ಅಧಿಕಾರಿಗಳೊಂದಿಗೆ ವಾಗ್ವಾದಕ್ಕೆ ಅವಕಾಶವಿರುವುದಿಲ್ಲ.

*ಮಾನ್ಯ ನಿರ್ದೇಶಕರ ಆದೇಶದ ಮೇರೆಗೆ}*

ಜಂಟಿ ನಿರ್ದೇಶಕರು (ಆಡಳಿತ),
ಪದವಿ ಪೂರ್ವ ಶಿಕ್ಷಣ ಇಲಾಖೆ.

**<u>ಇವರಿಗೆ:</u>**

1. ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ.
2. ಪ್ರಾಚಾರ್ಯರ ವರ್ಗಾವಣಾ ಅಂತಿಮ ಆಯ್ಕೆ ಪಟ್ಟಿಯಲ್ಲಿನ ಪ್ರಾಚಾರ್ಯರ ಮಾಹಿತಿಗಾಗಿ.
3. ಕಚೇರಿ ಪ್ರತಿ.